ಓಎಸ್ ನಂ. 41/2020 ಪಿ.ಡಬ್ಲೂಃ 1

ದಿನಾಂಕಃ 28.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಕೆ.ಆರ್.ಜೆ.. ವಕೀಲರಿಂದ

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

1 ನೇ ಪ್ರತಿವಾದಿ ನನಗೆ ಬರೆದುಕೊಟ್ಟಂತಹ ಕ್ರಯದ ಕರಾರಿನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು 1 ನೇ ಪ್ರತಿವಾದಿಯು ಕರಾರುಪತ್ರದ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.. ಸದರಿ ದಾಖಲೆಯನ್ನು ನಿಪಿ 1, ರಾಜೇಶ್ವರಿ ಸಹಿಯನ್ನು ನಿಪಿ 1(ಎ), 1(ಬಿ), 1(ಸಿ), 1(ಡಿ) ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ರಂಗಪ್ಪ ಹಾಗೂ ತಿರುಮಲೇಗೌಡ ರವರು ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು 1(ಎಫ್), 1(ಜಿ) ಎಂದು ಗುರುತಿಸಲಾಯಿತು. ಪತ್ರವನ್ನು ಕೇಶವಮೂರ್ತಿ ರವರು ಬರೆದಿರುತ್ತಾರೆ. ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1(ಹೆಚ್) ಎಂದು ಗುರುತಿಸಲಾಯಿತು. ಮುಂದುವರೆದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪತ್ರವನ್ನು ರಾಜೇಶ್ವರಿ ರವರು ಬರೆದುಕೊಟ್ಟಿರುತ್ತಾರೆ . ಸದರಿ ಪತ್ರವನ್ನು ನಿಪಿ 2 ಎಂದು ಗುರುತಿಸಲಾಯಿತು. ರಾಜೇಶ್ವರಿ ರವರ ಸಹಿಗಳನ್ನು ಕ್ರಮವಾಗಿ ನಿಪಿ 2(ಎ), 2(ಬಿ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ದೊರೆಸ್ವಾಮಿ ಹಾಗೂ ಗೋಪಾಲ್ ರವರು ಸಹಿ ಮಾಡಿರುತ್ತಾರೆ. ದೊರೆಸ್ವಾಮಿ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ 2(ಸಿ), ಗೋಪಾಲಸ್ ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ 2(ಡಿ) ಸದರಿ ಪತ್ರವನ್ನು

ಕೇಶವಮೂರ್ತಿ ರವರು ಬರೆದಿರುತ್ತಾರೆ . ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ 2(ಎಫ್) ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎರಡು ಪಹಣಿ ಪತ್ರಿಕೆಗಳನ್ನು ನಿಪಿ 3 ಮತ್ತು 4, ಎಂಟು ಅಂಚೆ ಸ್ವೀಕೃತಿಗಳನ್ನು ನಿಪಿ 5 ರಿಂದ 12, ನೋಟಿಸ್ ಜಾರಿಯಾಗದೇ ಬಂದಂತಹ ಎರಡು ಅಂಚೆ ಲಕೋಟೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಸದರಿ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದ ಮುಂದೆ ಹೊಡೆದು ಅದರಲ್ಲಿನ ನೋಟಿಸ್ ಪ್ರತಿಗಳನ್ನು ನೋಡಲಾಗಿ ಸದರಿ ನೋಟಿಸ್‌ಗಳು ಜೆರಾಕ್ಸ್ ಪ್ರತೆಯಾದ ಕಾರಣ ನಿಶಾನೆಯಾಗಿ ಗುರುತಿಸಿರುವುದಿಲ್ಲ.

ಶ್ರೀ. ಕೆ.ಆರ್.ಜೆ. ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ

ಎಸ್.ಸಿ. ನಂ. 9/2020 ಪಿ.ಡಬ್ಲೂಃ 3

ದಿನಾಂಕಃ 20.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಹೆಚ್.ಆರ್.ಜೆ.. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಪ್ರತಿವಾದಿಗಳ ವಾದಿಯ ಬಳಿ ಸಾಲ ಪಡೆದು ಬಗ್ಗೆ ಪ್ರಾಮಿಸರಿ ಪತ್ರ ಹಾಗೂ ಹಣ

ಸಂದಾಯ ರಶೀದಿ ಬರೆದುಕೊಟ್ಟಿದ್ದು, ಸದರಿ ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಪ್ರಾಮಿಸರಿ ಪತ್ರ ಹಾಗೂ ಹಣ ಸಂದ ರಶೀದಿಯಲ್ಲಿ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 1 (ಜಿ) ಮತ್ತು 1(ಜೆ) ಎಂದು ಗುರುತಿಸಲಾಗಿರುತ್ತದೆ. ಪ್ರತಿವಾದಿಗಳ ಸಹಿಯನ್ನು ಸಹಾ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ಈಗಾಗಲೇ ನಿಪಿ 1(ಎ) ಹಾಗೂ 1(ಸಿ) , 1(ಬಿ) ಮತ್ತು 1(ಡಿ) ಎಂದು ಗುರುತಿಸಲಾಗಿರುತ್ತದೆ.

ಶ್ರೀ. ಕೆ.ಜಿ.ಟಿ. ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ